# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 36 ಫ್ರಾ.ಸಾ. : 31**

| | | |
|---|---|---|
| ಸಾಕ್ಷಿಯ ಹೆಸರು | : | ಮೋಹನದಾಸ ಮಂಗೇಶ ಹಿರೋಡ್ಕರ್ |
| ತಂದೆಯ ಹೆಸರು | : | ಮಂಗೇಶ ಹಿರೋಡ್ಕರ್ |
| ವಯಸ್ಸು | : | 72 ವರ್ಷ |
| ಕೆಲಸ | : | ಅಲ್ವಾರೀಸ್ ಮತ್ತು ಥೋಮಸ್ ಅಲ್ವಾರೀಸ್ ಕಂಪನಿಯ ಕಾರವಾರದ ಶಾಖೆಯಲ್ಲಿ ಕೆಲಸ |
| ವಾಸ | : | ಸೋನಾರವಾಡ, ಕಾರವಾರ |

**ದಿನಾಂಕಃ 14-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-</u>**

1. ನಾನು 2008 ನೇ ಇಸವಿಯಿಂದ Alvares and Thomas Alvares Centre ನ ಕಾರವಾರದ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸದರಿ ಕಂಪನಿಯ ಮುಖ್ಯ ಕಚೇರಿ ಮಂಗಳೂರಿನಲ್ಲಿರುತ್ತದೆ. ಸದರಿ ಕಂಪನಿಯಲ್ಲಿ ಗ್ಯಾಬ್ರಿಯಲ್ ಸಿಡ್ನಿ ರವರು ಮೆನೇಜರ್ ಆಗಿರುತ್ತಾರೆ. ಸದರಿ ಕಂಪನಿಯಿಂದ ಗ್ಯಾಬ್ರಿಯಲ್ ರವರಿಗೆ ಮಹೀಂದ್ರಾ ಕಂಪನಿಯ ಕಾರನ್ನು ನೀಡಲಾಗಿರುತ್ತದೆ. ಕಾರವಾರಕ್ಕೆ ಶಿಪ್‌ಗಳು ಬರುವ ಸಮಯದಲ್ಲಿ ಗ್ಯಾಬ್ರಿಯಲ್ ರವರು ಮಂಗಳೂರಿನಿಂದ ಕಂಪನಿಯಿಂದ ನೀಡಲಾದ ಕಾರು ನಂ.ಕೆಎ-19/ಎಂ.ಎಫ್-9020 ನೇದರಲ್ಲಿ ಬಂದು ಹೋಗುತ್ತಿದ್ದರು. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ 2018 ರ ಅಕ್ಟೋಬರ್ ತಿಂಗಳಿನಲ್ಲಿ, ದಿನಾಂಕ ನೆನಪಿಲ್ಲ, ಗ್ಯಾಬ್ರಿಯಲ್ ರವರು ಸದರಿ ಕಾರಿನಲ್ಲಿ ಮಂಗಳೂರಿನಿಂದ ಕಾರವಾರಕ್ಕೆ ಬಂದಿದ್ದರು. ನಂತರ ಶಿಪ್ಪಿಂಗ್ ಕೆಲಸ ಮುಗಿಸಿ, ಅವರು ಮಂಗಳೂರಿಗೆ ಹೋಗಿರುತ್ತಾರೆ.

2. ನಂತರ ದಿನಾಂಕ ನೆನಪಿಲ್ಲ, ಕಾರವಾರದ ಪೊಲೀಸರು ನನಗೆ ಕರೆ ಮಾಡಿ, ಸದರಿ ವಾಹನವನ್ನು ತಂದು ಹಾಜರುಪಡಿಸಲು ತಿಳಿಸಿರುತ್ತಾರೆ, ಅದರಂತೆ ನಾನು ನಮ್ಮ ಮುಖ್ಯ

ಕಚೇರಿಗೆ ಕರೆ ಮಾಡಿ, ವಿಷಯ ತಿಳಿಸಿ, ಸದರಿ ಕಾರನ್ನು ಮಂಗಳೂರಿನಿಂದ ತರಿಸಿ, ಪೊಲೀಸರ ಮುಂದೆ ಹಾಜರುಪಡಿಸಿದ್ದೆನು. ಅಲ್ಲಿ ಪೊಲೀಸರು ಕಾರಿನ ಜೊತೆ ನನ್ನನ್ನು ನಿಲ್ಲಿಸಿ, ಫೋಟೊ ತೆಗೆದುಕೊಂಡರು ಹಾಗೂ ಕಾರನ್ನು ಅವರೇ ಇಟ್ಟುಕೊಂಡರು. ಸದರಿ ಕಾರನ್ನು ಯಾವ ಕಾರಣಕ್ಕಾಗಿ ಅವರು ಇಟ್ಟುಕೊಂಡರು ಎಂದು ನನಗೆ ಗೊತ್ತಿಲ್ಲ, ಆದರೆ ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಎಂದು ಹೇಳಿರುತ್ತಾರೆ. ಈಗ ನ್ಯಾಯಾಲಯದ ಮುಂದಿರುವ 4 ಮತ್ತು 5 ನೇ ಆರೋಪಿತರನ್ನು ನಾನು ಠಾಣೆಯಲ್ಲಿ ನೋಡಿರುವುದಿಲ್ಲ ಹಾಗೂ ಅವರು ನನ್ನ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಅವರು ನೀಡಿದ ಹೇಳಿಕೆಯನ್ನು ತಿಳಿದುಕುಂಡು ನಾನೂ ಪೊಲೀಸರು ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನಾನು ವಾಹನವನ್ನು ಹಾಜರುಪಡಿಸಿದ ನಂತರ ಪೊಲೀಸರು ಸದರಿ ವಾಹನವನ್ನು ಜಪ್ತುಪಡಿಸಿಕೊಂಡು, ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಜಪ್ತು ಪಂಚನಾಮೆಯನ್ನು ಈಗಾಗಲೇ ನಿಪಿ–72 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–72(ಬಿ) ಎಂದು ಗುರುತಿಸಲಾಯಿತು. ನಿಪಿ–73 ಫೋಟೊದಲ್ಲಿ ಸಾಕ್ಷಿಯು ತಾನು ಹಾಜರುಪಡಿಸಿದ ಕಾರನ್ನು ಹಾಗೂ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ–**

3. ದಿ.15–10–2018 ರಂದು ಗ್ಯಾಬ್ರಿಯಲ್ ನು ಕಾರವಾರಕ್ಕೆ ಬಂದಾಗ, ಕಾರು ಪಂಚರ್ ಆಗಿದ್ದರಿಂದ, ಅದನ್ನು ರಿಪೇರಿ ಹಾಗೂ ವಾಷಿಂಗ್ ಸಲುವಾಗಿ 4 ನೇ ಆರೋಪಿ ನಿಖಿಲ್ ಗೆ ನೀಡಿ ಹೋಗಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ. ಸದರಿ ಕಾರನ್ನು 4 ನೇ ಆರೋಪಿ ಸರ್ವಿಸ್ ಮಾಡಿ ಇಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ದಿ.19–10–2018 ರಂದು 1 ನೇ ಆರೋಪಿಯು, ಕಾರವಾರದ ಶಿಪ್ಪಿಂಗ್ ಏಜೆನ್ಸಿ ಮೂಲಕ ತನಗೆ ಗೋವಾದಲ್ಲಿ ಕೆಲಸ ಇದೆ, ಕಾರನ್ನು ನೀಡುವಂತೆ ಕಂಪನಿಯವರಿಗೆ ಕೇಳಿಕೊಂಡಿದ್ದರಿಂದ, ನಾನು ಸದರಿ ಕಾರು 4 ನೇ ಆರೋಪಿಯ ಬಳಿ ಇದೆ, ಅದನ್ನು ತೆಗೆದುಕೊಂಡು ಹೋಗಿ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಂತರ 4 ನೇ ಆರೋಪಿ ನಿಖಿಲ್ ಸದರಿ ಕಾರನ್ನು ಗೋವಾಕ್ಕೆ ತೆಗೆದುಕೊಂಡು

ಹೋಗಿ, ನಂತರ ಪುನಃ ವಾಪಾಸು ತಂದು ನಮ್ಮ ಕಚೇರಿಯ ಬಳಿ ತಂದು ಇಟ್ಟಿದ್ದ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂತರ ಸದರಿ ಕಾರನ್ನು ಮಂಗಳೂರಿಗೆ ಕಳುಹಿಸಿದ್ದೆ ಎಂದರೆ ಸರಿ. ನಂತರ ಗ್ಯಾಬ್ರಿಯಲ್ ರವರು ಸದರಿ ಕಾರನ್ನು ಮಂಗಳೂರಿನಿಂದ ಕಾರವಾರಕ್ಕೆ ತಂದು, ಅದನ್ನು ಸರ್ವಿಸಿಂಗ್ ಗಾಗಿ ಅದನ್ನು ಇಲ್ಲಿಯೇ ಬಿಟ್ಟು ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿ.07−12−2018 ರಂದು ಪೊಲೀಸರು ನನಗೆ ಕರೆ ಮಾಡಿ, ಸದರಿ ಕಾರನ್ನು ಪ್ರೇಮ್ ಕುಮಾರ್ ರವರ ಕೊಲೆ ಪ್ರಕರಣದಲ್ಲಿ ತನಿಖೆಗೆ ಅವಶ್ಯಕತೆ ಇದೆ ಎಂದು ಹೇಳಿ ಅದನ್ನು ತಂದು ಹಾಜರುಪಡಿಸುವಂತೆ ಹೇಳಿರುತ್ತಾರೆ ಎಂದರೆ ಸಾಕ್ಷಿಯು, ಕಾರನ್ನು ಹಾಜರುಪಡಿಸಿರುತ್ತೇನೆ, ಆದರೆ ಪೊಲೀಸರು ಯಾವ ಕಾರಣಕ್ಕಾಗಿ ಎಂದು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ.

4. ಕಾರನ್ನು ಹಾಜರುಪಡಿಸಿದ ನಂತರ ಪೊಲೀಸರು 1 ನೇ ಆರೋಪಿಯು ಪ್ರೇಮ್ ಕುಮಾರನನ್ನು ಕೊಲೆ ಮಾಡಿಸಿದ ನಂತರ ಸದರಿ ಕಾರನ್ನು 4 ನೇ ಆರೋಪಿ ನಿಖಿಲ್ ಚಲಾಯಿಸಿಕೊಂಡು ಹೋಗಿ, 1 ನೇ ಆರೋಪಿಯನ್ನು ಗೋವಾಕ್ಕೆ ಬಿಟ್ಟು ಬಂದಿರುತ್ತಾನೆ ಎಂದು ಪೊಲೀಸರಿಂದ ತಿಳಿಯಿತು ಎಂದರೆ ಸಾಕ್ಷಿಯು ಪೊಲೀಸರು ನನಗೆ ಏನೂ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ದಿನ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದಿರು ಎಂದರೆ ಸರಿ. ಅಲ್ಲಿ 4 ಮತ್ತು 5 ನೇ ಆರೋಪಿಯತರು ಹಾಜರಿದ್ದು, ನನ್ನ ಸಮಕ್ಷಮ ಪೊಲೀಸರು 4 ನೇ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು 4 ಮತ್ತು 5 ನೇ ಆರೋಪಿತರು ಠಾಣೆಯಲ್ಲಿರಲಿಲ್ಲ ಎಂದು ನುಡಿಯುತ್ತಾರೆ. ವ್ಯವಹಾರದ ಸಲುವಾಗಿ 1 ನೇ ಆರೋಪಿಯು ಪ್ರೇಮ್ ಕುಮಾರನನ್ನು ಕೊಲೆ ಮಾಡಿಸಿರುತ್ತಾನೆ ಹಾಗೂ 2 ಮತ್ತು 3 ನೇ ಆರೋಪಿತರು ಪ್ರೇಮ್ ಕುಮಾರನನ್ನು ಕೊಲೆ ಮಾಡಿರುತ್ತಾರೆ ಎಂಬ ವಿಷಯ 4 ಮತ್ತು 5 ನೇ ಆರೋಪಿತರಿಗೆ ತಿಳಿದಿದ್ದರೂ ಸಹ, ಅವರು ವಿಷಯವನ್ನು ಪೊಲೀಸರಿಗೆ ತಿಳಿಸದೇ ಹಾಗೂ 4 ನೇ ಆರೋಪಿಯು 1 ನೇ ಆರೋಪಿಗೆ ತಪ್ಪಿಸಿಕೊಳ್ಳಲು ಕಾರಿನಲ್ಲಿ ಗೋವಾಕ್ಕೆ ಕರೆದುಕೊಂಡು ಹೋಗಿ, ಬಿಟ್ಟು ಬಂದು ಸಹಾಯ ಮಾಡಿರುವ ವಿಷಯ ನನಗೆ ತಿಳಿಯಿತು ಎಂದರೆ ಸಾಕ್ಷಿಯು, ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

5. ಸಾಕ್ಷಿಯು ನೀಡಿದ ಹೇಳಿಕೆಯಲ್ಲಿ "ಕಾರವಾರ ಶಹರ ಪೊಲೀಸ್ ಠಾಣೆಗೆ ಬಂದು ನೋಡಿದಾಗ ____________________________ ನನಗೆ ವಿಷಯ ಗೊತ್ತಾಯಿತು" ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ–92 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ